2016 ಕ.ತೀ.ವ 1443

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ

## ವಿಭಾಗೀಯ ವ್ಯವಸ್ಥಾಪಕರು ಮೆ. ಓರಿಯಂಟಲ್ ಇನ್ಸೂರೆನ್ಸ್ ಕಂಪನಿ ನಿಯಮಿತ –ವಿರುದ್ಧ– ಜೆ.ಎಂ. ಸೋಮನಾಥ್ ಮತ್ತು ಇನ್ನೊಬ್ಬರು*

ಮೋಟಾರು ವಾಹನ ಅಧಿನಿಯಮ, 1988 – ಪ್ರಕರಣ 166ರ ಅಡಿಯಲ್ಲಿ ಅರ್ಜಿ.

ಹೊಣೆಗಾರಿಕೆ ಆಧಾರದ ಮೇಲೆ ನ್ಯಾಯಾಧಿಕರಣವು ಹೊರಡಿಸಿದ ತೀರ್ಪು ಮತ್ತು ಐತೀರ್ಪನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಲಾಗಿದೆ. ನ್ಯಾಯಾಧಿಕರಣವು ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ಹೊರಿಸಿದ್ದು, ಅದಕ್ಕೆ ವಿರುದ್ಧವಾಗಿ, ಅಪಘಾತಕ್ಕೊಳಗಾದ ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿಲ್ಲವೆಂಬುದು ವಿಮಾ ಕಂಪನಿಯ ಅಹವಾಲಾಗಿದೆ. ಅಪರಾಧಕ್ಕೊಳಗಾದ ಲಾರಿಗೆ ಅಪೀಲುದಾರ/ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಿಲ್ಲವೆಂದು ಸಾಬೀತುಮಾಡಲು ಕ್ಲೇಮುದಾರರು ಮುಖ್ಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ನ್ಯಾಯಿಕ ವ್ಯವಹರಣೆಯಲ್ಲಿ ಪಕ್ಷಕಾರನು ನಕಾರಾತ್ಮಕವಾದುದನ್ನು ಸಾಬೀತುಪಡಿಸಬೇಕೆಂದು ನಿರೀಕ್ಷಿಸಲಾಗದು ಎಂಬುದು ಸುಸ್ಥಾಪಿತವಾದ ಕಾನೂನಾಗಿದೆ. ನ್ಯಾಯಾಲಯವು ನೀಡಿದ ನಿರ್ಣಯವನ್ನು ಪ್ರಶ್ನಿಸುವ ಯಾವುದೇ ಅಪೀಲನ್ನು ಮಂಡಿಸಿರದ ಲಾರಿಯ ಮಾಲೀಕನ ಮೇಲೆ ಹೊಣೆ ವಹಿಸಲಾಗಿದೆ. ತದನುಸಾರವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ. ವಿಮಾ ಕಂಪನಿಯನ್ನು ದೋಷಮುಕ್ತಗೊಳಿಸಲಾಗಿದೆ, ನ್ಯಾಯಾಧಿಕರಣವು ಐತೀರ್ಪು ನೀಡಿದ ನಷ್ಟಪರಿಹಾರದ ಮೊತ್ತವನ್ನು ಬಡ್ಡಿಯೊಂದಿಗೆ ಕ್ಲೇಮುದಾರನಿಗೆ, ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ 2 ತಿಂಗಳುಗಳೊಳಗಾಗಿ ಪಾವತಿಸಲು ವಾಹನದ ಮಾಲೀಕನಿಗೆ ನಿರ್ದೇಶಿಸಲಾಗಿದೆ.

*ಎಂಎಫ್ಎ ಸಂಖ್ಯೆ: 6767/2009, ದಿನಾಂಕ: 22ನೇ ಜನವರಿ, 2016.

ಅಪೀಲುದಾರರ ಪರ: ಶ್ರೀ ಎಸ್.ಎನ್. ಅಶ್ವಥನಾರಾಯಣ್, ವಕೀಲರು – ಇವರ ಪರವಾಗಿ. ಶ್ರೀ ನರಸಿಂಹಮೂರ್ತಿ ಎಲ್, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಆರ್. ಶಶಿಧರ, ವಕೀಲರು.
2ನೇ ಪ್ರತ್ಯರ್ಜಿದಾರರ ಪರ: ಶ್ರೀ ಬಿ.ಎಲ್. ಕುಮಾರ್, ವಕೀಲರು (ಗೈರುಹಾಜರು).

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇಗೌಡ:**

ಹೊಣೆಗಾರಿಕೆಯ ಆಧಾರದ ಮೇಲೆ ನ್ಯಾಯಾಧಿಕರಣದಿಂದ ಹೊರಡಿಸಲಾದ ತೀರ್ಪು ಮತ್ತು ಐತೀರ್ಪನ್ನು ಪ್ರಶ್ನಿಸಿ, ವಿಮಾ ಕಂಪನಿಯು ಈ ಅಪೀಲನ್ನು ಸಲ್ಲಿಸಿದೆ.

2. ಈ ಅಪೀಲಿನಲ್ಲಿ ಪ್ರಶ್ನಿಸಲಾದ ತೀರ್ಪು ಮತ್ತು ಐತೀರ್ಪಿನ ಮೂಲಕ ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ಪುರಸ್ಕರಿಸಿದೆ ಮತ್ತು ವಾರ್ಷಿಕ ಶೇ.6ರಷ್ಟು ಬಡ್ಡಿಯೊಂದಿಗೆ 40,300/– ರೂ.ಗಳ ನಷ್ಟ ಪರಿಹಾರವನ್ನು ನೀಡಿದೆ ಮತ್ತು ಅಪೀಲುದಾರರಾದ ವಿಮಾ ಕಂಪನಿಗೆ ಹಾಗೂ ವಾಹನದ ಮಾಲೀಕರಾದ 2ನೇ ಪ್ರತ್ಯಪೀಲುದಾರನಿಗೆ ಸದರಿ ಮೊತ್ತವನ್ನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಪಾವತಿಸಲು ನಿರ್ದೇಶಿಸಿದೆ.

3. ಅಪೀಲುದಾರ–ವಿಮಾ ಕಂಪನಿಯು ಪರ ಮಾನ್ಯ ವಕೀಲ ಶ್ರೀ ಅಶ್ವಥನಾರಾಯಣರವರ ಪರವಾಗಿ ಹಾಜರಾದ ಶ್ರೀ ಎಲ್. ನರಸಿಂಹಮೂರ್ತಿ ಹಾಗೂ ಪ್ರತ್ಯಪೀಲುದಾರ–ಕ್ಲೇಮುದಾರನ ಪರ ಹಾಜರಾದ ಮಾನ್ಯ ವಕೀಲ ಶ್ರೀ ಆರ್. ಶಶಿಧರ್‌ರವರ ವಾದಗಳನ್ನು ನಾನು ಆಲಿಸಿದ್ದೇನೆ ಹಾಗೂ ಅಪೀಲಿನಲ್ಲಿ ಪ್ರಶ್ನಿತವಾಗಿರುವ ತೀರ್ಪು ಮತ್ತು ಐತೀರ್ಪನ್ನು ಅವಲೋಕಿಸಿದ್ದೇನೆ.

ವಾಹನದ ಮಾಲೀಕನಾದ 2ನೇ ಪ್ರತ್ಯಪೀಲುದಾರನ ಪರ ಯಾವುದೇ ನಿವೇದನೆ ಇರುವುದಿಲ್ಲ.

4. ನೋಂದಣಿ ಸಂಖ್ಯೆ 16/3–2868ನ್ನು ಹೊಂದಿರುವ ಲಾರಿಯನ್ನು ಅದರ ಚಾಲಕನು ದುಡುಕು ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ಕಾರಣದಿಂದಾಗಿ, 30.04.2007ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ 1ನೇ ಪ್ರತ್ಯಪೀಲುದಾರ – ಕ್ಲೇಮುದಾರನಿಗೆ ಉಂಟಾದ ಕೆಲವು ಗಾಯಗಳಿಗೆ ಮತ್ತು ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಮೊತ್ತಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲದಿರುವುದರಿಂದ, ಈ ಅಪೀಲಿನಲ್ಲಿ ನನ್ನ ಗಮನಕ್ಕೆ ಬಂದಿರುವ ಏಕಮಾತ್ರ ಅಂಶವೆಂದರೆ:

> *'ಅಪರಾಧಕ್ಕೊಳಗಾದ ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿಲ್ಲವೆಂದು ವಿಮಾಕರ್ತರು ರುಜುವಾತುಪಡಿಸಿಲ್ಲವೆಂದು ಅಭಿಪ್ರಾಯಪಡುವ ಮೂಲಕ ಅಪೀಲುದಾರ–ವಿಮಾ ಕಂಪನಿಯ ಮೇಲೆ ಹೊಣೆಯನ್ನು ಹೊರಿಸುವ ಬಗ್ಗೆ ನ್ಯಾಯಾಧಿಕರಣದ ನಿರ್ಣಯವು ಕಾನೂನಿನಲ್ಲಿ ಊರ್ಜಿತವಾದುದೆ?*

5. ಅಪೀಲುದಾರ–ವಿಮಾ ಕಂಪನಿಯ ಪರ ಮಾನ್ಯ ವಕೀಲರಾದ ಶ್ರೀ ಎಲ್. ನರಸಿಂಹಮೂರ್ತಿಯವರು, ಅಪೀಲುದಾರ ವಿಮಾ ಕಂಪನಿಯು ತನ್ನ ಆಕ್ಷೇಪಣೆಗಳ ಪಟ್ಟಿಯುಲ್ಲೇ, ಅಪರಾಧಕ್ಕೊಳಗಾದ ಲಾರಿಗೆ ಅಪೀಲುದಾರರಲ್ಲಿ ವಿಮೆ ಮಾಡಿಸಲಾಗಿತ್ತು ಎಂಬ ಕ್ಲೇಮುದಾರನ ವಾದವನ್ನು ನಿರಾಕರಿಸಿದ್ದರೂ ಮತ್ತು ಅಪೀಲುದಾರನ ಮೇಲೆ ಹೊಣೆಯನ್ನು ಹೊರಿಸುವಲ್ಲಿ ನ್ಯಾಯಾಧಿಕರಣವು ತಪ್ಪೆಸಗಿದೆಯೆಂಬಷ್ಟರ ಮಟ್ಟಿಗೆ ತರ್ಕಬದ್ಧ ಸಾಕ್ಷ್ಯವನ್ನು ಮಂಡಿಸುವ ಮೂಲಕ ಸದರಿ ವಾದವನ್ನು ಕ್ಲೇಮುದಾರನು ಸಾಬೀತುಗೊಳಿಸಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ, ಅವರು ಹೊಣೆಗಾರಿಕೆಗೆ ಸಂಬಂಧಪಡುವಷ್ಟರಮಟ್ಟಿಗೆ ನ್ಯಾಯಾಧಿಕರಣದ ತೀರ್ಪು ಹಾಗೂ ಐತೀರ್ಪನ್ನು ಮಾರ್ಪಾಡುಗೊಳಿಸುವ ಮೂಲಕ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿದ್ದಾರೆ.

6. ನ್ಯಾಯಾಧಿಕರಣವು ತೀರ್ಮಾನಿಸಿದ ನಷ್ಟ ಪರಿಹಾರವನ್ನು ಅಪೀಲುದಾರ – ವಿಮಾ ಕಂಪನಿಯಿಂದಾಗಲೀ ಅಥವಾ ಅಪಘಾತದಲ್ಲಿ ಭಾಗಿಯಾದ ವಾಹನದ ಮಾಲೀಕನಿಂದಾಗಲೀ ಸ್ವೀಕರಿಸಲು ಕ್ಲೇಮುದಾರನು ಸಿದ್ಧನಾಗಿದ್ದಾನೆಂದು ಒಂದನೇ ಪ್ರತ್ಯಪೀಲುದಾರ–ಕ್ಲೇಮುದಾರನ ಪರ ಹಾಜರಾದ ಮಾನ್ಯ ವಕೀಲ ಶ್ರೀ ಆರ್. ಶಶಿಧರ್‌ರವರು ಅಭಿಪ್ರಾಯಪಟ್ಟಿದ್ದಾರೆ.

7. ಇನ್ನು ಮುಂದೆ ಕ್ಲೇಮುದಾರನೆಂದು ಕರೆಯಲಾಗುವ ಒಂದನೇ ಪ್ರತ್ಯಪೀಲುದಾರನು, 2ನೇ ಪ್ರತ್ಯಪೀಲುದಾರನಿಂದ ನಷ್ಟಪರಿಹಾರವನ್ನು ಕೋರಿ, ಹೊಳಲ್ಕೆರೆ ತಾಲ್ಲೂಕಿನ ಎಂಎಸಿಟಿ ಸಮಕ್ಷಮದಲ್ಲಿ ಮೋಟಾರು ವಾಹನಗಳ ಅಧಿನಿಯಮದ 166ನೇ ಪ್ರಕರಣದಡಿ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾನೆ ಮತ್ತು ಅಪೀಲುದಾರನು ಅವರನ್ನು ಅಪರಾಧದಲ್ಲಿ ಭಾಗಿಯಾದ ವಾಹನದ ಮಾಲೀಕ ಹಾಗೂ ವಿಮಾಕರ್ತ ಎಂದು ವಿವರಿಸಿರುವುದರಿಂದ ಅವರನ್ನು ಇನ್ನು ಮುಂದೆ ಅನುಕ್ರಮವಾಗಿ ಮಾಲೀಕ ಹಾಗೂ ವಿಮಾ ಕಂಪನಿ ಎಂದು ಕರೆಯಲಾಗುತ್ತದೆ.

8. ಅಪೀಲಿನಲ್ಲಿ ಪ್ರಶ್ನಿತವಾದ ತೀರ್ಪಿನ ಅವಲೋಕನವು, ನ್ಯಾಯಾಧಿಕರಣದ ಮುಂದೆ, ಕ್ಲೇಮು ಅರ್ಜಿಯ ನೋಟೀಸನ್ನು ಕಳುಹಿಸಿದ್ದರೂ ಸಹ 2ನೇ ಪ್ರತ್ಯಪೀಲುದಾರನಾದ ವಾಹನದ ಮಾಲೀಕನು ಗೈರುಹಾಜರಾಗಿದ್ದನು ಮತ್ತು ಅವನನ್ನು ಏಕಪಕ್ಷೀಯವಾಗಿ ಇರಿಸಲಾಗಿತ್ತು ಎಂಬುದನ್ನು ಎತ್ತಿ ತೋರಿಸುತ್ತದೆ. ಅಪೀಲುದಾರ ವಿಮಾ ಕಂಪನಿಯು ಕ್ಲೇಮು ಅರ್ಜಿಯಲ್ಲಿ 2ನೇ ಪ್ರತ್ಯಪೀಲುದಾರರು ತಮ್ಮ ವಕೀಲರ ಮುಖಾಂತರ ಪ್ರತಿನಿಧಿತವಾಗಿರುವ ಹಾಗೂ ಅವರು ಕ್ಲೇಮು ಅರ್ಜಿಯಲ್ಲಿ ಮಾಡಲಾದ ದೃಢೋಕ್ತಿಗಳನ್ನು ನಿರಾಕರಿಸಿ ಮತ್ತು ಅಪರಾಧಕ್ಕೊಳಗಾದ ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿರುವುದಿಲ್ಲ ಹಾಗೂ ಲಾರಿಯ ಚಾಲಕ ಸಿಂಧುವಾದ ಮತ್ತು ಪರಿಣಾಮಕಾರಿಯಾದ ಚಾಲನಾ ಪರವಾನಗಿಯನ್ನು ಹೊಂದಿರುವುದಿಲ್ಲ ಹಾಗೂ ವಿಮಾ ಕಂಪನಿಯ ಹೊಣೆಗಾರಿಕೆಯು ಆರ್.ಸಿ., ಎಫ್.ಸಿ., ಹಾಗೂ ಡಿ.ಎಲ್.ಗಳ ಸಿಂಧುತ್ವದ ರುಜುವಾತಿಗೆ ಒಳಪಟ್ಟಿರುತ್ತದೆ ಎಂದು ವಾದಿಸಿ ತಮ್ಮ ಆಕ್ಷೇಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

9. ಪಕ್ಷಕಾರರ ಪರಸ್ಪರ ವಿರುದ್ಧವಾದ ವಾದಗಳ ಆಧಾರದ ಮೇಲೆ, ನ್ಯಾಯಾಧಿಕರಣವು ತನ್ನ ಪರಿಶೀಲನೆಗಾಗಿ ಈ ಮುಂದಿನ ವಿವಾದಾಂಶಗಳನ್ನು ರಚಿಸಿದೆ:

> *1. ಅರ್ಜಿದಾರನು, 1ನೇ ಪ್ರತ್ಯರ್ಜಿದಾರನಿಗೆ ಸೇರಿದ ಮತ್ತು 2ನೇ ಪ್ರತ್ಯರ್ಜಿದಾರನಲ್ಲಿ ವಿಮೆ ಮಾಡಿಸಲಾದ, ನೋಂದಣಿ ಸಂಖ್ಯೆ ಕೆಎ 16/ಎ–2868ನ್ನು ಹೊಂದಿರುವ ವಾಹನವು ಭಾಗಿಯಾಗಿರುವ, ಹೊಳಲ್ಕೆರೆ ತಾಲ್ಲೂಕಿನ ಬಿ–ದುರ್ಗದ ಬಸವಲಿಂಗಪ್ಪನವರ ಕಣದ ಬಳಿ ದಿನಾಂಕ 30.4.2007ರಂದು ರಾತ್ರಿ ಸುಮಾರು 8 ಗಂಟೆಯಲ್ಲಿ ನಡೆದ ಮೋಟಾರು ವಾಹನ ಅಪಘಾತದಲ್ಲಿ ತನಗೆ ಗಾಯಗಳುಂಟಾಗಿವೆಯೆಂದು ಸಾಬೀತುಪಡಿಸುತ್ತಾನೆಯೇ?*
>
> *2. ಅರ್ಜಿದಾರನು ಮುಖ್ಯವಾಗಿ ಅಪಘಾತವು ಸದರಿ ವಾಹನದ ದುಡುಕು ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಸಂಭವಿಸಿದೆಯೆಂದು ಸಾಬೀತುಪಡಿಸುತ್ತಾನೆಯೇ?*
>
> *3. ಅರ್ಜಿದಾರನು ನಷ್ಟಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ? ಹಾಗಿದ್ದಲ್ಲಿ, ಪರಿಹಾರದ ಮೊತ್ತವೆಷ್ಟು? ಹಾಗೂ ಅದನ್ನು ಯಾರು ಕೊಡಬೇಕು?*

10. ಕ್ಲೇಮುದಾರನು, ತನ್ನ ವಾದದ ಸಮರ್ಥನೆಯಲ್ಲಿ, ನೋಂದಣಿ ಸಂಖ್ಯೆ ಕೆಎ–16/ಎ–2868ನ್ನು ಹೊಂದಿರುವ ಲಾರಿ ಚಾಲಕನ ದುಡುಕು ಮತ್ತು ನಿರ್ಲಕ್ಷ್ಯದ ಚಾಲನೆಯ ಕಾರಣದಿಂದ ದಿನಾಂಕ 30.4.2007ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ತನಗೆ ಗಾಯಗಳುಂಟಾಗಿವೆ ಮತ್ತು ಸದರಿ ಲಾರಿಗೆ 2ನೇ ಪ್ರತ್ಯರ್ಜಿದಾರ – ವಿಮಾ ಕಂಪನಿಯಲ್ಲಿ (ಇಲ್ಲಿ ಅಪೀಲುದಾರ) ವಿಮೆ ಮಾಡಿಸಲಾಗಿದೆ ಮತ್ತು ವೈದ್ಯಕೀಯ ಹಾಗೂ ಪ್ರಾಸಂಗಿಕ ವೆಚ್ಚಗಳಿಗಾಗಿ ಕೆಲ ಮೊತ್ತವನ್ನು ಖರ್ಚು

ಮಾಡಲಾಗಿದ್ದು, ಅವನನ್ನೇ ಪಿ.ಡಬ್ಲ್ಯೂ–1 ಎಂಬುದಾಗಿ ವಿಚಾರಣೆ ಮಾಡಲಾಗಿದೆ ಹಾಗೂ ಪ್ರಥಮ ಮಾಹಿತಿ ವರದಿ, ಸ್ಥಳ ಮಹಜರು, ಜಫ್ತಿ ಮಹಜರು, ಐಎಂವಿ ವರದಿ, ಗಾಯದ ಪ್ರಮಾಣಪತ್ರ, ಆರೋಪಪಟ್ಟಿ, ಬಿಡುಗಡೆ ಪತ್ರ, ವೈದ್ಯಕೀಯ ಬಿಲ್‌ಗಳು ಮತ್ತು ಔಷಧಿ ಚೀಟಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆ ಪಿ.1 ರಿಂದ ಪಿ.12 ಎಂದು ಗುರುತಿಸಲಾಯಿತು.

11. ಓರಿಯೆಂಟಲ್ ವಿಮಾ ಕಂಪನಿ ನಿಯಮಿತದಲ್ಲಿ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಪಿ. ವಿಜಯ್‌ಕುಮಾರ್‌ರವರನ್ನು ವಿಮಾ ಕಂಪನಿಯ ಪರವಾಗಿ, ಆರ್.ಡಬ್ಲ್ಯೂ1 ಎಂಬುದಾಗಿ ವಿಚಾರಣೆ ಮಾಡಲಾಯಿತು ಮತ್ತು ನೋಂದಣಿ ಸಂಖ್ಯೆ ಕೆಎ–16/ಜೆ–6214ನ್ನು ಹೊಂದಿರುವ ಹೀರೋ ಹೊಂಡಾ ಸ್ಪ್ಲೆಂಡರ್‌ನ ವಿಮಾ ಪಾಲಿಸಿಯನ್ನು ಹಾಜರುಪಡಿಸಲಾಯಿತು ಹಾಗೂ ಅದನ್ನು ನಿಶಾನೆ ಆರ್.1 ಎಂಬುದಾಗಿ ಗುರುತಿಸಲಾಯಿತು.

12. ದಾಖಲೆಯಲ್ಲಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಪರಿಶೀಲನೆಯ ಮೇಲೆ, ನ್ಯಾಯಾಧಿಕರಣವು, ನೋಂದಣಿ ಸಂಖ್ಯೆ ಕೆಎ–16/ಎ–2868ನ್ನು ಹೊಂದಿರುವ ವಾಹನವು ಭಾಗಿಯಾಗಿರುವ ಹೊಳಲ್ಕೆರೆ ತಾಲ್ಲೂಕಿನ ಬಿ–ಹೊಸದುರ್ಗದ ಬಸವಲಿಂಗಪ್ಪನವರ ಕಣದ ಬಳಿ ದಿನಾಂಕ 30.4.2007ರಂದು ಸಂಭವಿಸಿದ ಮೋಟಾರು ವಾಹನ ಅಪಘಾತದಲ್ಲಿ ತನಗೆ ಗಾಯಗಳಾಗಿವೆಯೆಂದು ಅರ್ಜಿದಾರನು/ಕ್ಲೇಮುದಾರನು ಸಾಬೀತುಪಡಿಸಿದ್ದಾನೆಂದು ತೀರ್ಮಾನಿಸಿ, 1ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದೆ. ಸದರಿ ಲಾರಿಯನ್ನು ದುಡುಕು ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ ಕಾರಣದಿಂದ ಅಪಘಾತ ಸಂಭವಿಸಿದೆಯೆಂದು 2ನೇ ವಿವಾದಾಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಿದೆ ಮತ್ತು ರೂ.40,300/–ಗಳ ನಷ್ಟ ಪರಿಹಾರ ನೀಡುವ ಮೂಲಕ ಕ್ಲೇಮು ಅರ್ಜಿಯನ್ನು ಪುರಸ್ಕರಿಸಿದೆ ಮತ್ತು ಸದರಿ ಮೊತ್ತವನ್ನು ವಾಹನದ ಮಾಲೀಕ ಹಾಗೂ ವಿಮಾ ಕಂಪನಿಯು ಜಂಟಿಯಾಗಿ ಹಾಗೂ ಪ್ರತ್ಯೇಕವಾಗಿ ಪಾವತಿಸಬೇಕೆಂದು ನಿರ್ದೇಶಿಸಿದೆ ಹಾಗೂ ತದನುಸಾರವಾಗಿ 3ನೇ ವಿವಾದಾಂಶಕ್ಕೆ ಉತ್ತರಿಸಿದೆ.

13. 2ನೇ ಪ್ರತ್ಯರ್ಜಿದಾರನು ಅಪಘಾತದಲ್ಲಿ ಭಾಗಿಯಾದ ಲಾರಿಯ ವಿಮಾಕರ್ತನಾಗಿದ್ದಾನೆಂದು ಕ್ಲೇಮು ಅರ್ಜಿಯ 22ನೇ ಕಂಡಿಕೆಯಲ್ಲಿ ನಿರ್ದಿಷ್ಟವಾಗಿ ವಾದಿಸಿರುವ ಮತ್ತು ತನ್ನ ಮುಖ್ಯ ವಿಚಾರಣೆಯಲ್ಲಿ ಅದನ್ನೇ ಒತ್ತಿ ಹೇಳಿರುವ ಕ್ಲೇಮುದಾರನು ಅಪರಾಧಕ್ಕೊಳಗಾದ ವಾಹನಕ್ಕೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸುವ ಮೂಲಕವಾಗಲೀ ಅಥವಾ ಇತರ ಯಾವುದೇ ಕಾನೂನುಬದ್ಧ ರೀತಿಯಲ್ಲಿ ಸಾಕ್ಷ್ಯವನ್ನು ಒದಗಿಸುವ ಮೂಲಕವಾಗಲೀ, ಸದರಿ ವಾದವನ್ನು ರುಜುವಾತು ಮಾಡಿರುವುದಿಲ್ಲ. ಈ ಕಾರಣದಿಂದ, ಕ್ಲೇಮು ಅರ್ಜಿಯ ವ್ಯಾಜ್ಯ ಶೀರ್ಷಿಕೆಯಲ್ಲಿ ವಿಮಾ ಕಂಪನಿಯ ವಿಳಾಸದ ನಂತರ ಕ್ಲೇಮುದಾರನು ನಮೂದಿಸಿದ ಪಾಲಿಸಿ ಸಂಖ್ಯೆಗೆ ಸಂಬಂಧಿಸಿದ ಪಾಲಿಸಿಯನ್ನು ವಿಮಾ ಕಂಪನಿಯು ಹಾಜರುಪಡಿಸಿದೆ. ಇನ್ನೊಂದು ಕಡೆ, ಕ್ಲೇಮುದಾರನನ್ನು ಪಾಟೀ ಸವಾಲಿನಲ್ಲಿ ಪಿ.ಡಬ್ಲ್ಯೂ.1 ಎಂಬುದಾಗಿ ವಿಚಾರಣೆ ಮಾಡಲಾಗಿದ್ದು, ಅವನು ವಿಮೆಯನ್ನು ಯಾವ ಸ್ಥಳದಿಂದ ಪಡೆದಿದ್ದನು ಮತ್ತು ಅದು ಯಾವ ಅವಧಿಯಿಂದ ಯಾವ ಅವಧಿಯವರೆಗೆ ಜಾರಿಯಲ್ಲಿತ್ತೆಂದು ಕ್ಲೇಮು ಅರ್ಜಿಯಲ್ಲಿ ಹೇಳಿಲ್ಲವೆಂದು ಒಪ್ಪಿಕೊಂಡಿದ್ದಾನೆ.

14. ಅಪರಾಧಕ್ಕೊಳಗಾದ ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿಲ್ಲವೆಂದು ವಿಮಾ ಕಂಪನಿಯು ತನ್ನ ಆಕ್ಷೇಪಣಾ ಪಟ್ಟಿಯಲ್ಲಿ ಮಾಡಲಾದ ವಾದವನ್ನು ಸುಸಂಬದ್ಧವಾದ ಸಮಯದಲ್ಲಿ, ವಿಮಾ ಕಂಪನಿಯ ಆಡಳಿತಾಧಿಕಾರಿಯಾದ ಆರ್. ಡಬ್ಲ್ಯೂ.1ರವರ ಮೌಖಿಕ ಸಾಕ್ಷ್ಯದ ಮೂಲಕ ಪುಷ್ಟೀಕರಿಸಲಾಯಿತು.

15. ಅಷ್ಟೇ ಅಲ್ಲದೆ, ಕ್ಲೇಮು ಅರ್ಜಿಯ ವ್ಯಾಜ್ಯ ಶೀರ್ಷಿಕೆಯಲ್ಲಿ ವಿಮಾ ಕಂಪನಿಯ ಹೆಸರಿನ ಸ್ವಲ್ಪ ಕೆಳಗೆ ಕ್ಲೇಮುದಾರನು ನಮೂದಿಸಿದ ಪೊಲೀಸ್ ಸಂಖ್ಯೆಗೆ ಸಂಬಂಧಿಸಿದಂತೆ ಪಾಲಿಸಿಯನ್ನು ವಿಮಾ ಕಂಪನಿಯು ಹಾಜರುಪಡಿಸಿದೆ. ಸದರಿ ಪಾಲಿಸಿಯ ಅವಗಾಹನೆಯಿಂದ, ಅದು ಅಪಘಾತಕ್ಕೆ ಕಾರಣವಾದ ಲಾರಿಗೆ ಸಂಬಂಧಪಡುವುದಿಲ್ಲ ಹಾಗೂ ಅದು ಅಪೀಲುದಾರರಲ್ಲಿ ವಿಮೆಗೊಳಗಾದ ಹೀರೋ ಹೊಂಡಾ ಮೋಟಾರ್ ಸೈಕಲ್‌ಗೆ ಸಂಬಂಧಪಡುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

16. ಅಪರಾಧಕ್ಕೊಳಗಾದ ಲಾರಿಯ ಚಾಲಕನನ್ನು ಕ್ಲೇಮು ಅರ್ಜಿಗೆ ಪಕ್ಷಕಾರನನ್ನಾಗಿ ಮಾಡಿರುವುದಿಲ್ಲವೆಂಬುದನ್ನು ಗಮನಿಸುವುದು ಸೂಕ್ತವಾಗಿದೆ. 1ನೇ ಪ್ರತ್ಯರ್ಜಿದಾರನಾದ ಲಾರಿಯ ಮಾಲೀಕನು ಗೈರು ಹಾಜರಾಗಿದ್ದನು ಮತ್ತು ಅವನನ್ನು ಏಕಪಕ್ಷೀಯವಾಗಿರಿಸಲಾಗಿತ್ತು. ಅಪರಾಧಕ್ಕೊಳಗಾದ ಲಾರಿಗೆ ಅಪೀಲುದಾರ – ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಲಾಗಿತ್ತೆಂದು ಕ್ಲೇಮುದಾರನು ವಾದಿಸಿದ್ದು, ಅಷ್ಟರಮಟ್ಟಿಗೆ ಸಾಕ್ಷ್ಯವನ್ನು ಒದಗಿಸುವ ಮೂಲಕ ಸದರಿ ವಾದವನ್ನು ರುಜುವಾತು ಮಾಡಿರುವುದಿಲ್ಲ. ವಿಮಾ ಕಂಪನಿಯು ಅಪಘಾತ ಸಂಭವಿಸಿದ ಸ್ಥಳವಾದ ಚಿತ್ರದುರ್ಗ ಶಾಖೆಗೆ ಸಂಬಂಧಿಸಿದ ಪಾಲಿಸಿಯನ್ನು ಹಾಜರುಪಡಿಸಿಲ್ಲ ಮತ್ತು ಅದು ಅಪಘಾತಕ್ಕೊಳಗಾದ ಲಾರಿಯ ಮಾಲೀಕನಾಗಲೀ ಅಥವಾ ಚಾಲಕನಿಗಾಗಲೀ ಯಾವುದೇ ನೋಟೀಸನ್ನು ನೀಡಿಲ್ಲವೆಂದು ನ್ಯಾಯಾಧಿಕರಣವು ತಿಳಿಸಿದ್ದು, ಅಪರಾಧಕ್ಕೊಳಗಾದ ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿರಲಿಲ್ಲವೆಂದು ಸಾಬೀತುಪಡಿಸಲು ಅಪೀಲುದಾರ–ವಿಮಾ ಕಂಪನಿಯು ವಿಫಲವಾಗಿದೆಯೆಂದು ನಿರ್ಣಯಿಸಿದೆ ಮತ್ತು ತತ್ಪರಿಣಾಮವಾಗಿ ಕ್ಲೇಮುದಾರನಿಗೆ ಐತೀರ್ಪು ನೀಡಲಾದ ನಷ್ಟಪರಿಹಾರವನ್ನು ಜಂಟಿ ಮತ್ತು ಪ್ರತ್ಯೇಕವಾಗಿ ಪಾವತಿಸಲು ಅಪೀಲುದಾರ–ವಿಮಾ ಕಂಪನಿಗೆ ಹಾಗೂ ಅಪರಾಧಕ್ಕೊಳಗಾದ ಲಾರಿಯ ಮಾಲೀಕನಿಗೆ ನಿರ್ದೇಶಿಸಿದೆ.

17. ಒಂದು ನ್ಯಾಯಿಕ ವ್ಯವಹರಣೆಯ ಪಕ್ಷಕಾರನು ನಕಾರಾತ್ಮಕವಾದದ್ದನ್ನು ಸಾಬೀತುಪಡಿಸುವುದನ್ನು ನಿರೀಕ್ಷಿಸಲಾಗದು ಎಂಬುದು ಸುಸ್ಥಾಪಿತವಾದ ಕಾನೂನಾಗಿದೆ. ಸದ್ಯದ ಮೊಕದ್ದಮೆಯಲ್ಲಿ ಅಪರಾಧಕ್ಕೊಳಗಾದ ಲಾರಿಗೆ ಅಪೀಲುದಾರ – ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಲಾಗಿತ್ತೆಂದು ಕ್ಲೇಮುದಾರನು ವಾದಿಸಿದ್ದು, ಅಪರಾಧಕ್ಕೊಳಗಾದ ಲಾರಿಗೆ ಸಂಬಂಧಿಸಿದ ವಿಮಾ ಪಾಲಿಸಿಯನ್ನು ಹಾಜರುಪಡಿಸುವ ಮೂಲಕ ಅಥವಾ ಅಷ್ಟರಮಟ್ಟಿಗೆ ತರ್ಕಬದ್ಧ ಸಾಕ್ಷ್ಯವನ್ನು ಒದಗಿಸುವ ಮೂಲಕ ಅವನು ತನ್ನ ವಾದವನ್ನು ಸಾಬೀತುಪಡಿಸಲು ನಿರೀಕ್ಷಿಸಲಾಗಿತ್ತು. ವಿಮಾ ಕಂಪನಿಯು ಕ್ಲೇಮು ಅರ್ಜಿಯ ವ್ಯಾಜ್ಯ ಶೀರ್ಷಿಕೆಯಲ್ಲಿ ಕ್ಲೇಮುದಾರನು ನಮೂದಿಸಿದ ಪಾಲಿಸಿ ಸಂಖ್ಯೆಯ ಪಾಲಿಸಿಯನ್ನು ಹಾಜರುಪಡಿಸಿದೆ. ಆದರೆ, ಅದು ಅಪರಾಧಕ್ಕೊಳಗಾದ ಲಾರಿಗೆ ಸಂಬಂಧಸಿದ್ದಲ್ಲ ಮತ್ತು ಅದು ಹೀರೋಹೋಂಡಾ ಸ್ಪ್ಲೆಂಡರ್ ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟಿದ್ದಾಗಿದೆ. ವಿಮಾ ಕಂಪನಿಯು ಅಪರಾಧಕ್ಕೊಳಗಾದ

ಲಾರಿಗೆ ತಮ್ಮಲ್ಲಿ ವಿಮೆ ಮಾಡಿಸಿಲ್ಲವೆಂಬುದನ್ನು ಸಾಬೀತುಪಡಿಸಿಲ್ಲವೆಂಬ ನ್ಯಾಯಾಧಿಕರಣದ ಅಭಿಪ್ರಾಯವು ಸಾಕ್ಷ್ಯದ ಕಾನೂನಿಗೆ ಗೊತ್ತಿರದ ಅಂಶವಾಗಿದೆ. ಬಹುಶಃ ಈ ಕಾರಣಕ್ಕಾಗಿಯೇ, ಕ್ಲೇಮುದಾರನ ಪರ ಹಾಜರಾದ ಮಾನ್ಯ ವಕೀಲರು ತಮ್ಮ ನಿವೇದನೆಯ ಪ್ರಾರಂಭದಲ್ಲಿಯೇ, ನ್ಯಾಯಾಧೀಕರಣವು ಐತೀರ್ಪು ನೀಡಿದ ನಷ್ಟಪರಿಹಾರವನ್ನು ಅಪರಾಧಕ್ಕೊಳಗಾದ ಲಾರಿಯ ಮಾಲೀಕನಿಂದ ಅಥವಾ ವಿಮಾಕರ್ತನಿಂದ ಸ್ವೀಕರಿಸಲು ಕ್ಲೇಮುದಾರನು ಸಿದ್ಧನಾಗಿದ್ದಾನೆಂದು ಹೇಳಿರುತ್ತಾರೆ. ಅವರ ನಿವೇದನೆಯ ಕಾಲಾವಧಿಯು, ಅಪರಾಧಕ್ಕೊಳಗಾದ ಲಾರಿಗೆ ಅಪೀಲುದಾರ – ವಿಮಾ ಕಂಪನಿಯಲ್ಲಿ ವಿಮೆ ಮಾಡಿಸಿಲ್ಲವೆಂಬುದನ್ನು ತೋರಿಸುತ್ತದೆ. ಈ ಮೇಲಿನದರ ದೃಷ್ಟಿಯಿಂದ, ಹೊಣೆಗಾರಿಕೆಯ ಆಧಾರದ ಮೇಲೆ, ಅಪರಾಧಕ್ಕೊಳಗಾದ ವಾಹನದ ಮಾಲೀಕ ಅಥವಾ ವಿಮಾಕರ್ತನ ಮೇಲೆ ಹೊಣೆಯನ್ನು ಜಂಟಿ ಅಥವಾ ಪ್ರತ್ಯೇಕವಾಗಿ ಹೊರಿಸುವಲ್ಲಿ, ನ್ಯಾಯಾಧಿಕರಣದ ನಿರ್ಣಯವು ಕಾನೂನಿನಲ್ಲಿ ಸಮರ್ಥಿತವಾಗಿಲ್ಲ.

18. ಈಗ, ಹೊಣೆಗಾರಿಕೆಯ ಆಧಾರದ ಮೇಲೆ, ವಿಮಾ ಕಂಪನಿಯ ಮೇಲೆ ಹೊಣೆಯನ್ನು ಹೊರಿಸುವಲ್ಲಿ, ನ್ಯಾಯಾಧಿಕರಣದ ನಿರ್ಣಯವು ಕಾನೂನಿನಲ್ಲಿ ಸಮರ್ಥಿತವಾಗಿಲ್ಲವೆಂದು ತೀರ್ಮಾನಿಸಿರುವ ಮತ್ತು ವಿಮಾ ಕಂಪನಿಯನ್ನು ಹೊಣೆಯಿಂದ ದೋಷಮುಕ್ತಗೊಳಿಸುವ ದೃಷ್ಟಿಯಿಂದ, ಅಪರಾಧಕ್ಕೊಳಗಾದ ಲಾರಿಯ ಚಾಲಕನ ದುಡುಕು ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಸಂಭವಿಸಿದ ಅಪಘಾತದಲ್ಲಿ ಕ್ಲೇಮುದಾರನಿಗೆ ಗಾಯಗಳುಂಟಾಗಿವೆಯೆಂದು ನಿರ್ಧರಿಸಿ, ನಿರ್ಲಕ್ಷ್ಯದಿಂದ ನ್ಯಾಯಾಲಯವು ನೀಡಿದ ನಿರ್ಣಯವನ್ನು ಪ್ರಶ್ನಿಸುವ ಯಾವುದೇ ಅಪೀಲನ್ನು ಮಂಡಿಸಿರದ, ಅಪರಾಧಕ್ಕೊಳಗಾದ ಲಾರಿಯ ಮಾಲೀಕನ ಮೇಲೆ ಹೊಣೆಯನ್ನು ಹೊರಿಸಬೇಕಾಗುತ್ತದೆ.

19. ತದನುಸಾರವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ. ಹೊಣೆಗಾರಿಕೆಗೆ ಸಂಬಂಧಪಡುವಷ್ಟರ ಮಟ್ಟಿಗೆ ನ್ಯಾಯಾಧಿಕರಣದ ತೀರ್ಪು ಮತ್ತು ಐತೀರ್ಪನ್ನು ಮಾರ್ಪಾಡು ಮಾಡಲಾಗಿದೆ. ವಿಮಾ ಕಂಪನಿಯನ್ನು ಹೊಣೆಯಿಂದ ದೋಷಮುಕ್ತಗೊಳಿಸಲಾಗಿದೆ ಮತ್ತು ಹೊಣೆಗಾರಿಕೆಯನ್ನು ವಾಹನದ ಮಾಲೀಕನಿಗೆ

ವಹಿಸಲಾಗಿದೆ ಹಾಗೂ ನ್ಯಾಯಾಧಿಕರಣವು ಐತೀರ್ಪು ನೀಡಿದ ನಷ್ಟಪರಿಹಾರವನ್ನು ಬಡ್ಡಿಯೊಂದಿಗೆ ಕ್ಲೇಮುದಾರನಿಗೆ, ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ ಪಾವತಿಸಲು ವಾಹನದ ಮಾಲೀಕನಿಗೆ ನಿರ್ದೇಶಿಸಲಾಗಿದೆ. ಅದು ವಿಫಲವಾದಲ್ಲಿ, ಕಾನೂನನ್ನು ಅವಲಂಬಿಸುವ ಮೂಲಕ ವಾಹನದ ಮಾಲೀಕನಿಂದ ನ್ಯಾಯಾಧಿಕರಣವು ಐತೀರ್ಪು ನೀಡಿದ ನಷ್ಟ ಪರಿಹಾರವನ್ನು ವಸೂಲು ಮಾಡಲು ಕ್ಲೇಮುದಾರನಿಗೆ ಅವಕಾಶವಿದೆ.

20. ಈ ಮೇಲ್ಕಂಡ ಅಪೀಲಿನಲ್ಲಿ ವಿಮಾ ಕಂಪನಿಯು ಠೇವಣಿ ಮಾಡಿದ ಮೊತ್ತವನ್ನು ಅಪೀಲುದಾರ–ವಿಮಾ ಕಂಪನಿಗೆ ಮರುಪಾವತಿ ಮಾಡಲು ಆದೇಶಿಸಲಾಗಿದೆ.

ವೆಚ್ಚಗಳಿಗೆ ಯಾವುದೇ ಆದೇಶವಿಲ್ಲ.